ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :

ಕೋಲಾರ ಜಿಲ್ಲೆಯ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ 54676 ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ 3578 ಅರ್ಜಿಗಳು ಬಾಕಿ ಉಳಿದಿವೆ. 2002–03, 2003–04, ಮತ್ತು 2004–05ನೇ ಸಾಲಿನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಬಾಕಿ ಉಳಿದಿರುವ ಅರ್ಜಿಗಳ ವಿವರ :

ಯೋಜನೆ	2002–03	2003–04	2004–05 (ಫೆಬ್ರವರಿ 2005ರ ಅಂತ್ಯಕ್ಕೆ)
ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ	4128	26883	23665
ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	-	1226	2352

ಆ) ಸಮಾಜ ಕಲ್ಯಾಣ ಇಲಾಖೆ : ಅನ್ವಯಿಸುವುದಿಲ್ಲ.

ಇ) **ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :**

ಕೋಲಾರ ಜಿಲ್ಲೆಯಲ್ಲಿ ಮೇಲ್ಕಂಡ ವರ್ಷಗಳಲ್ಲಿ ಅನುದಾನ ಕೊರತೆಯಿಂದ ಸದರಿ ಅರ್ಜಿಗಳು ಮಂಜೂರಾತಿಗೆ ಬಾಕಿ ಉಳಿದಿರುತ್ತವೆ. ಬಾಕಿ ಉಳಿದಿರುವ ಅರ್ಜಿಗಳಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆಗೆ ಪರಿಶೀಲಿಸಲಾಗುತ್ತಿದೆ. ಅನುದಾನ ಬಿಡುಗಡೆಯಾದ ನಂತರ ಎಲ್ಲಾ ಅರ್ಹ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು.

2700 (2756) ಶ್ರೀ ರಾಜೇಂದ್ರನ್ ಎಸ್. (ಕೆಜಿಎಫ್) :– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜದಲ್ಲಿ ಮುಚ್ಚಲ್ಪಟ್ಟಿರುವ ಸಕ್ಕರೆ ಕಾರ್ಖಾನೆಗಳು ಯಾವುವು;

ಆ) ಮುಚ್ಚಲು ಕಾರಣವೇನು;

ಇ) ಇದರಿಂದ ಎಷ್ಟು ಜನ ಕಾರ್ಮಿಕರು ಬೀದಿ ಪಾಲಾಗಿದ್ದಾರೆ;

ಈ) ಮುಚ್ಚಲಾದ ಎಲ್ಲಾ ಕಾರ್ಖಾನೆಗಳನ್ನು ತೆರೆಯಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು) :

ಅ) ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ

1. ಗಂಗಾವತಿ ಸಕ್ಕರೆ ಕಾರ್ಖಾನೆ, ಗಂಗಾವತಿ
2. ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡಬಾತಿ
3. ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ
4. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ, ಪಾಂಡವಪುರ
5. ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ, ರಾಯಬಾಗ್
6. ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ, ಹಿರಿಯೂರು
7. ಮಹದೇಶ್ವರ ಸಕ್ಕರೆ ಕಾರ್ಖಾನೆ, ಕೊಳ್ಳೇಗಾಲ
8. ಶಿರಗುಪ್ಪ ಶುಗರ್ಸ್, ಗೌರಿಬಿದನೂರು
9. ಶಿರಗುಪ್ಪ ಶುಗರ್ಸ್, ದೇಶನೂರು
10. ಸುಂದರಿ ಶುಗರ್ಸ್, ಕಂಪ್ಲಿ
11. ದೇವಿ ಶುಗರ್ಸ್, ಶಿವಮೊಗ್ಗ

ಆ) ಕಾರ್ಖಾನೆಗಳು ಮುಚ್ಚಲು ಈ ಕೆಳಗಿನ ಕಾರಣಗಳು ಪ್ರಮುಖವಾಗಿವೆ;

* ಕಾರ್ಖಾನೆಯ ಆಡಳಿತ ಮಂಡಳಿಯು ಸಮರ್ಪಕವಾಗಿ ಕಾರ್ಯನಿರ್ವಹಿಸಲು ವಿಫಲವಾಗಿರುವುದು.

* ಸಕ್ಕರೆ ಉತ್ಪಾದನಾ ವೆಚ್ಚವು ಮಾರಾಟ ವೆಚ್ಚಕ್ಕಿಂತ ಹೆಚ್ಚಾಗಿದ್ದುದು.

* ಸಕ್ಕರೆ ಬೆಲೆಯು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕುಸಿತ ಕಂಡಿರುವುದು.

* ರಾಜ್ಯದಲ್ಲಿ ಸತತವಾಗಿ ಕಳೆದ 3 ವರ್ಷಗಳಲ್ಲಿ ತೀವ್ರತರಹವಾದ ಬರಗಾಲವಿರುವುದರಿಂದ ಕಾರ್ಖಾನೆಗಳು ತನ್ನ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳಲು ವಿಫಲವಾಗಿರುತ್ತದೆ.

ಇ) ಸಹಕಾರಿ ರಂಗದಲ್ಲಿ 2089 ಮಂದಿ ಕಾರ್ಮಿಕರು, ಜಂಟಿ ವಲಯದ 378 ಕಾರ್ಮಿಕರು ಹಾಗೂ ಖಾಸಗಿ ರಂಗದಲ್ಲಿ 2275 ಜನ ಕಾರ್ಮಿಕರು ಕಾರ್ಖಾನೆಗಳು ಮುಚ್ಚಿರುವುದರಿಂದ ತೊಂದರೆಗೊಳಗಾಗಿದ್ದಾರೆ.

ಈ) ರಾಜ್ಯ ಸರ್ಕಾರವು ಸಹಕಾರಿ ವಲಯದ ಸಕ್ಕರೆ ಕಾರ್ಖಾನೆಗಳ ಪುನಃಶ್ಚೇತನಕ್ಕೆ ಸಚಿವ ಸಂಪುಟದ ಉಪಸಮಿತಿಯನ್ನು ಆಗಿನ ಕೃಷಿ ಸಚಿವರಾದ ಶ್ರೀ ವಿ.ಎಸ್.ಕೌಜಲಗಿರವರ ಅಧ್ಯಕ್ಷತೆಯಲ್ಲಿ ರಚಿಸಿದ್ದು, ಈ ಸಮಿತಿಯ ನೀಡಿರುವ ಶಿಫಾರಸ್ಸುಗಳು ಸರ್ಕಾರದ

ಪರಿಶೀಲನೆಯಲ್ಲಿದ್ದು, ಅದರನುಸಾರ ಸಕ್ಕರೆ ಕಾರ್ಖಾನೆಗಳ ಪುನಃಶ್ಚೇತನಕ್ಕೆ ಕ್ರಮಕೈಗೊಳ್ಳಲಾಗುವುದು, ಉಳಿದಂತೆ ಖಾಸಗಿ ಸಕ್ಕರೆ ಕಾರ್ಖಾನೆಗಳ ಪುನಶ್ಚೇತನ ಆಯಾ ಕಾರ್ಖಾನೆಗಳ ಮಾಲೀಕರ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ರಾಷ್ಟ್ರ ಮಟ್ಟದಲ್ಲಿ ಸಕ್ಕರೆ ಉದ್ಯಮವನ್ನು ಪುನಃಶ್ಚೇತನಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಟೊಟೇಜಾ ಸಮಿತಿಯನ್ನು ನೇಮಿಸಿದ್ದು, ಇದು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು 2005-06 ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡ ಕೆಲವು ಮಾರ್ಗೋಪಾಯಗಳು ತಿಳಿಸಿರುತ್ತದೆ.

1. ಕಾರ್ಖಾನೆಗಳು ಬ್ಯಾಂಕುಗಳಲ್ಲಿ ಹೊಂದಿರುವ ಅವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಪುನರ್ ನಿಗದಿಗೊಳಿಸುವುದು.

2. ಕೇಂದ್ರ ಸರ್ಕಾರದಿಂದ ಶೇ.4 ಬಡ್ಡಿ ದರದಲ್ಲಿ ಕಬ್ಬು ಅಭಿವೃದ್ಧಿ ಸಾಲಗಳನ್ನು ನೀಡುವುದು. ಈ ನಿಟ್ಟಿನಲ್ಲಿ ನಬಾರ್ಡ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಇವರು ಹೊರಡಿಸುವ ಸೂಕ್ತ ಮಾರ್ಗಸೂಚನೆಗಳನ್ನು ಅನುಸರಿಸಿ ಕಾರ್ಖಾನೆಗಳ ಪುನಃಶ್ಚೇತನಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

2701 (2757) ಶ್ರೀ ರಾಜೇಂದ್ರನ್ ಎಸ್. (ಕೆಜಿಎಫ್) :- ಮಾನ್ಯ ಬೃಹತ್, ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಐ.ಡಿ.ಬಿ.ಯು ಇದುವರೆವಿಗೂ ಎಷ್ಟು ಕೈಗಾರಿಕೆ ನಿವೇಶನಗಳನ್ನು ನಿರ್ಮಿಸಿ ಹಂಚಲಾಗಿದೆ. (ಹಂಚಿಕೆದಾರರ ಅಳತೆವಾರು ಪಟ್ಟಿಯನ್ನು ಒದಗಿಸುವುದು);

ಆ) ಹಂಚಿಕೆದಾರರ ಪೈಕಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ನೀಡಲಾದ ನಿವೇಶನಗಳು ಯಾವುವು; (ಅಳತೆವಾರು ಪಟ್ಟಿ ಲಗತ್ತಿಸುವುದು);

ಇ) ಈಗ ನಿರ್ಮಿಸಲಾಗುತ್ತಿರುವ ನಿವೇಶನಗಳ ಸಂಖ್ಯೆ ಎಷ್ಟು (ಪ್ರದೇಶವಾರು ವಿವರ ನೀಡುವುದು);

ಈ) ಈ ಸಂಸ್ಥೆಯ ಲೆಕ್ಕಪತ್ರಗಳ ಬಗ್ಗೆ ಪ್ರತಿ ವರ್ಷ ತಪ್ಪದೇ ಆಡಿಟ್ ನಡೆಯುತ್ತಿದೆಯೆ;

ಉ) ಹಾಗಿದ್ದಲ್ಲಿ ಆಡಿಟ್ ಆಕ್ಷೇಪಗಳು ಯಾವುವು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಕೆ.ಐ.ಡಿ.ಬಿ.ಯು ಇದುವರೆವಿಗೂ ಅಭಿವೃದ್ಧಿ ಪಡಿಸಿದ 94 ಕೈಗಾರಿಕಾ ಪ್ರದೇಶಗಳಲ್ಲಿ 9867 ನಿವೇಶನಗಳನ್ನು ವಿವಿಧ ಕೈಗಾರಿಕೆಗಳನ್ನು ಸ್ಥಾಪಿಸಲು ಹಂಚಿಕೆ ಮಾಡಿರುತ್ತದೆ.